**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 90/2020**

**ಚಾ.ಸಾಃ3, ಫ್ರಾ.ಸಾಃ2**

| | |
|---|---|
| ಸಾಕ್ಷಿದಾರನ ಹೆಸರು | ಗೋಪಾಲಕೃಷ್ಣ ಹೆಗಡೆ |
| ತಂದೆಯ ಹೆಸರು | ಗಣಪತಿ ಹೆಗಡೆ |
| ವಯಸ್ಸು | 48 ವರ್ಷಗಳು |
| ಉದ್ಯೋಗ | ಗೇರುಬೀಜ ಕಾರ್ಖಾನೆಯಲ್ಲಿ ಕೆಲಸ |
| ವಾಸ್ತವ್ಯ | ಕೋಣಾರ, ಮೂರೂರು |

**ಸಾಕ್ಷಿಯನ್ನು ದಿನಾಂಕಃ 09-06-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಚಾಸಾ-2 ನನಗೆ ಗೊತ್ತು. ಸಾಕ್ಷಿಗೆ ಈ ಪ್ರಕರಣದ ನಿಪಿ-2 ಗುನ್ನೆ ಜಾಗೆ ಪಂಚನಾಮೆ ಹಾಗೂ ನಿಪಿ-3 ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅವುಗಳ ಮೇಲಿನ ಸಹಿಗಳನ್ನು ತನ್ನದು ಎಂದು ತಿಳಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-2(ಬಿ) ಮತ್ತು 3(ಬಿ) ಎಂದು ಗುರುತಿಸಲಾಯಿತು.

ಸದರಿ ಸಹಿಗಳನ್ನು ದಿನಾಂಕ 23-06-2019 ರಂದು ಪೋಲಿಸರು ಚಾಸಾ-1 ರವರ ಮನೆಗೆ ಬಂದಿದ್ದು ಅವರ ಮನೆಯಲ್ಲಿ ಕಳ್ಳತನವಾಗಿರುವುದನ್ನು ಚಾಸಾ-1 ರವರು ಪೋಲಿಸರಿಗೆ ತೋರಿಸಿದ್ದರು. ಆ ಸಂದರ್ಭದಲ್ಲಿ ನಾನು, ಚಾಸಾ-1 ಮತ್ತು ಅವರ ಮನೆಯವರು, ಚಾಸಾ-2 ಮತ್ತು ಪೋಲಿಸರು ಹಾಜರಿದ್ದೆವು. ಪೋಲಿಸರು ಸ್ಥಳ ಪರಿಶೀಲನೆ ಮಾಡಿ ಕಚ್ಚಾ ನಕಾಶೆ ತಯಾರಿಸಿ ಛಾಯಾಚಿತ್ರ ತೆಗೆಸಿರುತ್ತಾರೆ. ಛಾಯಾಚಿತ್ರಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-4 ಮತ್ತು 5 ನ್ನು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಚಾಸಾ-1 ನನ್ನ ಅಕ್ಕನ ಗಂಡ. ನಮ್ಮ ಊರು ಚಾಸಾ-1 ರವರ ಮನೆಯಿಂದ ಸುಮಾರು 13 ಕಿಲೋಮೀಟರ್ ದೂರದಲ್ಲಿರುತ್ತದೆ. ಚಾಸಾ-1 ರವರು ಕಳ್ಳತನದ ವಿಚಾರವನ್ನು ರಾತ್ರಿ 07-30 ರಿಂದ 08-00 ರ ಸಮಯದಲ್ಲಿ ತಿಳಿಸಿರುತ್ತಾರೆ. ನಾನು ಚಾಸಾ-1 ರವರ ಮನೆಗೆ ಬಂದಾಗ ಸುಮಾರು 08-15 ಆಗಿತ್ತು. ನಾನುಸ್ಥಳಕ್ಕೆ ಬರುವಷ್ಟರಲ್ಲಿ ಸುಮಾರು 30-40 ಜನ ಸೇರಿದ್ದರು ಎಂದರೆ ಸಾಕ್ಷಿಯು ಅಲ್ಲಿ ಚಾಸಾ-1 ಮತ್ತು ಅವರ ಮನೆಯವರು, ನಾನು, ಪೋಲಿಸರು ಮತ್ತು ಇತರೆ 4 ಜನ ಇದ್ದರು. ಪಂಚನಾಮೆಯನ್ನು ಬರೆಯಲು ನಾನು ಮಾಹಿತಿ ನೀಡಿರುತ್ತೇನೆ. ನಾನು ಹೋದಾಗ ಪೋಲಿಸರು ಸ್ಥಳ ಪರಿಶೀಲನೆ ಮಾಡುತ್ತಿದ್ದರು. ನಂತರ ನಾನು ಹೇಳಿದ ಹಾಗೆ ಪಂಚನಾಮೆ ಮಾಡಿರುತ್ತಾರೆ. ನಿಪಿ-2 ಮತ್ತು 3 ನ್ನು ಮುಗಿಸಲು ಸುಮಾರು ಒಂದುವರೆ ಗಂಟೆ ಸಮಯ ತೆಗೆದುಕೊಂಡಿದ್ದರು. ನಿಪಿ-2 ಮತ್ತು 3 ನ್ನು

ಒಬ್ಬರೇ ಮಾಡಿದರೋ ಅಥವಾ ಬೇರೆ ಬೇರೆಯವರು ಮಾಡಿದರೋ ಎನ್ನುವುದನ್ನು ಹೇಳಲಾಗುವುದಿಲ್ಲ. ಕಾರಣ ಪೋಲಿಸರು ಸಮವಸ್ತ್ರದಲ್ಲಿದ್ದರು. ನಿಪಿ-3 ನ್ನು ತಯಾರಿಸಲು ಪೋಲಿಸರು ಮನೆಯನ್ನು ಇಂಚುಪಟ್ಟಿಯ ರೀತಿಯ ವಸ್ತುವಿನಿಂದ ಅಳತೆ ಮಾಡಿರುತ್ತಾರೆ. ಗೋದ್ರೇಜ್ ಬೀರು ಮನೆಯ ಪೂರ್ವ-ಉತ್ತರ ದಿಕ್ಕಿನಲ್ಲಿ ಇತ್ತು. ಈಗ ನಾನು ಹೇಳಿದ ದಿನಾಂಕದಂದು ಚಾಸಾ-1 ರವರ ಮನೆಯ ಬಳಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ ಮತ್ತು ಕಚ್ಚಾ ನಕಾಶೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಬಾವನವರಾಗಿರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**